# ಬೆನ್ನು ಕಾಡುವ ನೋವು ಮುಕ್ಕಾಗದ ಆಟದ ಕಾವು




ಧೋನಿ ವಿಶ್ವದರ್ಜೆ ಕ್ರಿಕೆಟ್‌ನಲ್ಲಿ 'ಎಕ್ಸ್ ಫ್ಯಾಕ್ಟರ್'. 'ತೋಳು, ಕೈಗಳಲ್ಲೇ ಆಟ ನಿಭಾಯಿಸಬಹುದು... ಬೆನ್ನುನೋವು ಇದ್ದರೆ ಇರಲಿ' ಎಂದು ಅವರು ವರ್ಷಗಳ ಹಿಂದೆಯೇ ಹೇಳಿದ್ದರು. 25ರ ಹರೆಯದಲ್ಲೇ ನೋವನ್ನು ಸುಖವಾಗಿ ಪರಿವರ್ತಿಸಿಕೊಳ್ಳುತ್ತಾ ಬಂದ ಪರಮ ಸಂಯಮಿಯ ಹದವರಿತ ಆಟಕ್ಕೆ ಮುಪ್ಪಡರಿಯೇ ಇಲ್ಲ.

■ ವಿಶಾಖ ಎನ್.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚಲಾರಂಭಿಸಿ ಇನ್ನೂ ಎರಡು ವರ್ಷಗಳಾಗಿದ್ದವು. ಮಹೇಂದ್ರ ಸಿಂಗ್ ಧೋನಿ ಬೆನ್ನಿಗೆ ಐಸ್ ಪ್ಯಾಕ್ ಕಟ್ಟಿಕೊಂಡು ಕಣಕ್ಕಿಳಿದಿದ್ದರು. ಅವರ ಟಿ–ಶರ್ಟ್‌ನಲ್ಲಿ ನಡುಬೆನ್ನ ಮೇಲೆ ಉಬ್ಬಿದಹಾಗೆ ಕಟ್ಟಿಕೊಂಡಿದ್ದ ಆ ಐಸ್‌ಪ್ಯಾಕ್ ಕಾಣುತ್ತಿತ್ತು. ಇಂಗ್ಲೆಂಡ್ ಎದುರಿನ ಆ ಪಂದ್ಯದಲ್ಲಿ ಧೋನಿ 106 ಎಸೆತಗಳಲ್ಲಿ 96 ರನ್ ಗಳಿಸಿ ಔಟಾದಾಗ ಎದುರಾಳಿಗಳು ಹೆಚ್ಚೇನೂ ಸಂಭ್ರಮಿಸಲಿಲ್ಲ. ಮೊನ್ನೆ ಮೊನ್ನೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನಲ್ಲಿ ಪದೇ ಪದೇ ಬೆನ್ನುನೋವಿನಿಂದ ಧೋನಿ ಮುಖ ಕಿವುಚುತ್ತಿರುವುದನ್ನು ನೋಡಿದಾಗ ಆ ಹಳೆಯ ಇನಿಂಗ್ಸ್ ನೆನಪಾಯಿತು.

ಆಟಕ್ಕೂ ನೋವಿಗೂ ಸಾವಯವ ಸಂಬಂಧವಿದೆ. ಎರಡು ಶಸ್ತ್ರಚಿಕಿತ್ಸೆಗಳ ನಂತರ ಕ್ರಿಕೆಟ್ ಬದುಕು ಕಟ್ಟಿಕೊಳ್ಳುವ ಕನಸು ಕಾಣುತ್ತಿರುವ ಹುಡುಗ, ವಿಂಡೀಸ್‌ನ ನಿಕೊಲಸ್ ಪೂರನ್ ಕಡೆ ನೋಡಿದರೆ ಅವರ ಆಪ್ತರ ಕಣ್ಣಾಲಿಗಳು ತುಂಬಿಬಂದಾವು. ಹೆರಿಗೆ ಆಗುವಾಗ ಸಂಕೀರ್ಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾಗ ಹಾಕಿದ್ದ ಸ್ಟಂಟ್ ಅನ್ನು ಈಗ ವೈದ್ಯರು ಹೊರತೆಗೆದಿದ್ದಾರೆ. ಅದನ್ನು ಅಡುಗೆಮನೆಯ ಕಟ್ಟೆ ಮೇಲೆ ಇಟ್ಟು, ಮತ್ತೆ ಆಟವಾಡಿ ಗೆಲ್ಲುವ ಕನಸು ಕಾಣುತ್ತಿರುವ ಸೆರೆನಾ ವಿಲಿಯಮ್ಸ್ ಭುಜಗಳ ಸ್ನಾಯುಗಳು ಈಗಲೂ ಗಟ್ಟಿ. ಒಂದು ವಿಶ್ವಕಪ್‌ನಲ್ಲಿ ಸರಣಿ ಸರ್ವೋತ್ತಮನಾದ ಮೇಲೆ ಕ್ಯಾನ್ಸರ್ ಬೀಸಿನಿಂದ ಬಚಾವಾಗಿ ಮತ್ತೆ ಕ್ರಿಕೆಟ್ ಆಡುತ್ತಿರುವ ಯುವರಾಜ್ ಸಿಂಗ್ ಅವರಿಗಂತೂ ನೋವು, ಮರಮ್ಮತು ಎರಡರ ಮರ್ಮ ಚೆನ್ನಾಗಿ ಗೊತ್ತು. ಅತಿಯಾದ ತೂಕದ ಬ್ಯಾಟ್ ಬಳಸಿ ಆಡುತ್ತಿದ್ದ ತೆಂಡೂಲ್ಕರ್ ಪೃಷ್ಠಭಾಗದಲ್ಲಿ ನೋವು ಕಾಣಿಸಿಕೊಂಡ ಮೇಲೆ ಮತ್ತೆ ಆಟಕ್ಕೆ ಕುದುರಿಕೊಳ್ಳಲು ಪರದಾಡಿದ್ದರಲ್ಲ. ಅವರ 'ಟೆನಿಸ್ ಎಲ್ಬೋ' ಶಸ್ತ್ರಚಿಕಿತ್ಸೆಯ ಕುರಿತ ಪುಟಗಳಲ್ಲೆ ವಿವರಗಳನ್ನೂ ಕ್ರೀಡಾಭಿಮಾನಿಗಳು ಓದಿದ್ದೆವಲ್ಲ. ಹೀಗೆ... ಆಟ ಹಾಗೂ ನೋವು ಒಂದೇ ನಾಣ್ಯದ ಎರಡು ಮುಖಗಳು.

ಬೆನ್ನುನೋವಿನ ನಡುವೆಯೂ ಮಹೇಂದ್ರ ಸಿಂಗ್ ಧೋನಿ ಈ ಐಪಿಎಲ್‌ನ ಯಶಸ್ವಿ ನಾಯಕ. ಪರಮ ಸಂಯಮಿ, ಜಾಣ, ಚಾಲಾಕಿ, ಇಂಪ್ರೂವೈಸ್ಡ್ ಶಾಟ್‌ಗಳ ಒಡೆಯ ಹೀಗೆ ಹಲವು ಗುಣವಿಶೇಷಣಗಳನ್ನು ಮಹೇಂದ್ರ ಸಿಂಗ್ ಧೋನಿ ಅವರಿಗೆ ಅಂಟಿಸುತ್ತಾ ಹೋಗಬಹುದು. ಅವರ ಬದುಕಿನ ಕುರಿತು ಬಂದ ಸಿನಿಮಾ ನೋಡಿ ಅನೇಕರು ಚಕಿತರಾಗಿದ್ದಾರೆ. ಅಂತಹ ಹೋರಾಟ ಅವರ ಕ್ರಿಕೆಟ್‌ನಲ್ಲಿ ಬೆರೆತಿದೆ.

1964ರಲ್ಲಿ ಧೋನಿ ಅಪ್ಪ ರಾಂಚಿಗೆ ಹೋದದ್ದು. ಮೆಕಾನ್ ಲಿಮಿಟೆಡ್ ಕಂಪೆನಿಯ ಪಂಪ್ ಆಪರೇಟರ್ ಆಗಿದ್ದ ಅವರ ಮನೆಯ ಪಕ್ಕದಲ್ಲೇ ಕ್ರೀಡಾಂಗಣ. 1981ರಲ್ಲಿ ಧೋನಿ ಹುಟ್ಟಿದ್ದು. ಬಾಲ್ಯದಲ್ಲಿ ಫುಟ್‌ಬಾಲ್ ಆಡುತ್ತಿದ್ದ ಧೋನಿ, ಗೋಲ್‌ಕೀಪರ್ ಆದರು. ಆಗ ತಡೆದ ಗೋಲ್‌ಗಳಿಗೂ ಕ್ರಿಕೆಟ್‌ನಲ್ಲಿ ಅವರು ವಿಕೆಟ್ ಕೀಪರ್ ಆದದ್ದಕ್ಕೂ ಏನೋ ಸಂಬಂಧವಿದೆ.

ಸೆಂಟ್ರಲ್ ಕೋಲ್ ಲಿಮಿಟೆಡ್ (ಸಿಸಿಎಲ್) ಎಂಬ ಕಂಪನಿಗೆ 1998ರ ಜನವರಿಯಲ್ಲಿ ದೇವಲ್ ಸಹಾಯ್ ಎಂಬ ನಿರ್ದೇಶಕರು ಬಂದರು. ಪಾಳುಬಿದ್ದಂತೆ ಇದ್ದ ಆ ಕ್ರೀಡಾಂಗಣದಲ್ಲಿ ಕ್ರಿಕೆಟ್ ಆಡಿಸಿದರೆ ಹೇಗೆ ಎಂಬ ಯೋಚನೆ ಅವರಿಗೆ ಹೊಳೆಯಿತು. ಶಾಲಾ ಕ್ರಿಕೆಟ್‌ನಲ್ಲಿ ಡಬಲ್